# ರಜನಿ ರಾಜಕೀಯ



ಕಳೆದ ವಾರ 66ನೇ ವಯಸ್ಸಿಗೆ ಕಾಲಿಟ್ಟ ರಜನಿಕಾಂತ್, (ಬರ್ತ್‌ಡೇ 12.12.1950) ಇನ್ನೇನು ರಾಜಕೀಯಕ್ಕೆ ಪ್ರವೇಶಿಸಲಿದ್ದಾರೆ ಎನ್ನುವ ಸುದ್ದಿ ತಮಿಳ್ನಾಡಿನಲ್ಲಿ ಜ್ವರದಂತೆ ಹಬ್ಬಿದೆ. ಹಾಗೆ ನೋಡಿದರೆ, ರಜನಿ ರಾಜಕೀಯಕ್ಕೆ ಬರುತ್ತಾರೆ ಎನ್ನುವ ಸುದ್ದಿ ಇದೇನೂ ಹೊಸತಲ್ಲ. ತಮಿಳುನಾಡಿಗೆ ಆಗಾಗ್ಗೆ ಬಂದು ಹೋಗುವ ಚಂಡಮಾರುತದಂತೆ ಇದು ಪ್ರತಿವರ್ಷದ ಗಾಸಿಪ್. ತಮಿಳ್ನಾಡಿನ ರಾಜಕೀಯದಲ್ಲಿ ಅಥವಾ ಸಾಮಾಜಿಕ ಜೀವನದಲ್ಲಿ ದಟ್ಟ ಪರಿಣಾಮ ಬೀರುವ ಯಾವುದೇ ಘಟನೆ ನಡೆದಾಗಲೂ ರಜನಿ ರಾಜಕೀಯ ಎಂಟ್ರಿಯ ಸುದ್ದಿ ಹೆಡೆಯಾಡುತ್ತದೆ. ಸ್ವಲ್ಪ ಸಮಯದಲ್ಲೇ ಠುಸ್ಸೆಂದು ಮಲಗಿಬಿಡುತ್ತದೆ.

ಸದ್ಯಕ್ಕೆ ತಮಿಳ್ನಾಡಿನ ಮುಖ್ಯಮಂತ್ರಿ ಜೆ.ಜಯಲಲಿತಾ ಸಾವಿನ ಹಿನ್ನೆಲೆಯಲ್ಲಿ ರಜನಿ ರಾಜಕೀಯ ಪ್ರವೇಶದ ಹೊಸ ಸುದ್ದಿ ತಲೆಯೆತ್ತಿದೆ. ಈ ಸಲ ಬಿಜೆಪಿ ಪಕ್ಷ ಸೇರುವ ಮೂಲಕ ರಜನಿಕಾಂತ್ ತನ್ನ ರಾಜಕೀಯ ಇನಿಂಗ್ಸ್ ಆರಂಭಿಸಲಿದ್ದಾರೆ ಎನ್ನುವುದು ಸುದ್ದಿ. ಜಯಲಲಿತಾ ಅವರ ನಿರ್ಗಮನದಿಂದ ತಮಿಳ್ನಾಡಿನಲ್ಲಿ ರಾಜಕೀಯ ಶೂನ್ಯವೊಂದು ಸೃಷ್ಟಿಯಾಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಜಯಲಲಿತಾ ಅವರ ಉತ್ತರಾಧಿಕಾರಿಯಾಗಿ ಮುಖ್ಯಮಂತ್ರಿ ಹುದ್ದೆಗೇರಿರುವ ಪನ್ನೀರ್ ಸೆಲ್ವಂ, ತನ್ನದೇ ಆದ ಚರಿಷ್ಮಾ ಹೊಂದಿರುವ ರಾಜಕಾರಣಿಯೂ ಅಲ್ಲ. ಈ ಬದಲಾದ ಸನ್ನಿವೇಶದ ಲಾಭ ಪಡೆಯಲು ಡಿಎಂಕೆ ಯ ಕರುಣಾನಿಧಿ ಮಾತ್ರವಲ್ಲ, ಇನ್ನೂ ಹಲವು ಸಿನಿಮಾ ತಾರೆಯರು ಪರದೆಯ ಹಿಂದೆ ಕಾದುಕುಳಿತಿದ್ದಾರೆ ಎನ್ನುವುದೂ ನಿಜ. ಇಂತಹ ಸಂದರ್ಭದಲ್ಲಿ ರಜನಿಕಾಂತ್ ರಾಜಕೀಯ ಪ್ರವೇಶಿಸುವ ಸಾಧ್ಯತೆಯನ್ನು ಅಲ್ಲಗಳೆಯುವುದೂ ಕಷ್ಟವೇ.

ಆದರೆ ರಜನಿಕಾಂತ್ ನಿಜಕ್ಕೂ ರಾಜಕೀಯದಲ್ಲಿ ಆಸಕ್ತಿ ಹೊಂದಿದ್ದಾರೆಯೆ? ಅವರ ರಾಜಕೀಯ ಸಿದ್ಧಾಂತವೇನು? ದ್ರಾವಿಡ ಸಿದ್ಧಾಂತದ ಬಗ್ಗೆ ಹೆಚ್ಚು ಒಲವು ಇರುವ ತಮಿಳು ಜನ, ಬಲಪಂಥೀಯ ಬಿಜೆಪಿ ಜತೆಗೆ ರಜನಿ ಗುರುತಿಸಿಕೊಂಡರೆ ಬೆಂಬಲಿಸುವರೆ? ಈ ಪ್ರಶ್ನೆಗಳಿಗೆ ಉತ್ತರ ಹುಡುಕುವುದು ಸುಲಭವಿಲ್ಲ.

1995ರಲ್ಲಿ ಪ್ರಧಾನಿ ಪಿ.ವಿ.ನರಸಿಂಹರಾವ್ ಅವರನ್ನು ಭೇಟಿಯಾದ ಬಳಿಕ ರಜನಿ ಕಾಂಗ್ರೆಸ್‌ಗೆ ಬಹಿರಂಗ ಬೆಂಬಲ ಸೂಚಿಸಿದ್ದರು. ರಜನಿ ಬೆಂಬಲದಿಂದ ಕಾಂಗ್ರೆಸ್ ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಪ್ರಚಂಡ ಬಹುಮತ ಪಡೆಯಲಿದೆ ಎನ್ನುವ ಸಮೀಕ್ಷೆಯೂ ಪ್ರಕಟವಾಗಿತ್ತು. ಆದರೆ 1996ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಣ್ಣಾಡಿಎಂಕೆ ಜತೆ ಮೈತ್ರಿ ಮಾಡಿಕೊಂಡಿತು. ರಜನಿಕಾಂತ್ ತಮ್ಮ ನಿಲುವು ಬದಲಿಸಿ ಡಿಎಂಕೆ ಮತ್ತು ಟಿಎಂಸಿ (ತಮಿಳು ಮಾನಿಲ ಕಾಂಗ್ರೆಸ್) ಮೈತ್ರಿಕೂಟವನ್ನು ಬೆಂಬಲಿಸಿದರು. ಆಗ ಟಿಎಂಸಿ ಚಿನ್ಹೆ ಸೈಕಲ್. ರಜನಿಕಾಂತ್ ನಟಿಸಿದ 'ಅಣ್ಣಾಮಲೈ' ಚಿತ್ರದಲ್ಲಿ ಸೈಕಲ್ ಹತ್ತಿ ಕುಳಿತಿರುವ ಚಿತ್ರವೊಂದು ಜನಪ್ರಿಯವಾಗಿತ್ತು. ಟಿಎಂಸಿ ಆ ಚಿತ್ರವನ್ನೇ ಚುನಾವಣೆಯಲ್ಲಿ ಪೋಸ್ಟರ್ ಮಾಡಿ ಬಳಸಿಕೊಂಡಿತು. ಡಿಎಂಕೆ ಟಿಎಂಸಿ ಮೈತ್ರಿಕೂಟ ಬಹುಮತದೊಂದಿಗೆ ಅಧಿಕಾರಕ್ಕೆ ಬಂತು.

2004ರಲ್ಲಿ ರಜನಿಕಾಂತ್ ತಮ್ಮ ನಿಲುವನ್ನು ಬದಲಿಸಿಕೊಂಡರು. 'ನಾನು ವೈಯಕ್ತಿಕವಾಗಿ ಈ ಸಲ ಬಿಜೆಪಿ ಗೆ ಮತ ಹಾಕುತ್ತೇನೆ. ನನ್ನ ಅಭಿಮಾನಿಗಳೂ ಅದಕ್ಕೇ ಮತ ನೀಡಬೇಕು' ಎಂದು ಕೋರಿದರು. ಆದರೆ ಆ ಸಲದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ತಮಿಳ್ನಾಡಿನಲ್ಲಿ ಒಂದು ಸ್ಥಾನವನ್ನೂ ಗೆಲ್ಲಲಾಗಲಿಲ್ಲ.

ಅಲ್ಲಿಂದೀಚೆಗೆ ಪ್ರತಿ ಚುನಾವಣೆಯಲ್ಲೂ ರಜನಿ ರಾಜಕೀಯಕ್ಕೆ ಬರುತ್ತಾರೆ ಎನ್ನುವ ಸುದ್ದಿ ಇದ್ದೇ ಇದೆ. ರಜನಿ ಅಭಿಮಾನಿಗಳು 'ನಮ್ಮ ತಲೈವರ್ ತಮಿಳ್ನಾಡಿನ ಮುಂದಿನ ಮುಖ್ಯಮಂತ್ರಿ' ಎಂದು ಹೇಳಲು ತೊಡಗಿ ಮೂರು ದಶಕಗಳೇ ಕಳೆದಿವೆ. 2008ರಲ್ಲಿ ರಜನಿಯ ಕೆಲವು ಅಭಿಮಾನಿಗಳು ಕೊಯಮತ್ತೂರಿನಲ್ಲಿ ತಾವೇ ಒಂದು ರಾಜಕೀಯ ಪಕ್ಷವನ್ನು ಕಟ್ಟಿಕೊಂಡರು. 'ದೇಶೀಯ ದ್ರಾವಿಡರ್ ಮಕ್ಕಳ ಮುನ್ನೇತ್ರ ಕಳಗಂ' ಎನ್ನುವ ಹೆಸರಿನ ಆ ಪಕ್ಷ ಧ್ವಜ ಮತ್ತು ಚಿನ್ಹೆಯನ್ನೂ ಪ್ರಕಟಿಸಿತು. ಆದರೆ ರಜನಿಕಾಂತ್ ಆ ಪಕ್ಷಕ್ಕೂ ತಮಗೂ ಯಾವುದೇ ಸಂಬಂಧವಿಲ್ಲ ಎಂದು ಪ್ರಕಟಿಸಿದರು. ತನ್ನ ಹೆಸರನ್ನು ಬಳಸಿಕೊಂಡರೆ ಕಾನೂನುಕ್ರಮ ಕೈಗೊಳ್ಳುವುದಾಗಿಯೂ ಬೆದರಿಕೆ ಹಾಕಿದರು. ಆ ಪಕ್ಷ ಅಲ್ಲಿಗೇ ಠುಸ್ಸೆಂದಿತು. 'ನನ್ನನ್ನು ರಾಜಕೀಯಕ್ಕೆ ಯಾರೂ ಎಳೆದುತರಲು ಸಾಧ್ಯವಿಲ್ಲ. ಹಾಗೆಯೇ ನಾನು ರಾಜಕೀಯಕ್ಕೆ ಇಳಿಯಹೊರಟರೆ ಯಾರೂ ತಡೆಯಲೂ ಸಾಧ್ಯವಿಲ್ಲ' ಎಂದು ತಮ್ಮದೇ ಸ್ಟೈಲ್ ಸ್ಟೇಟ್‌ಮೆಂಟ್ ಕೊಟ್ಟ ರಜನಿ, ಸಿನಿಮಾ ಕೆಲಸದಲ್ಲಿ ಮುಳುಗಿದರು.

ಇತ್ತೀಚಿನ ಸೂಪರ್‌ಹಿಟ್ ಚಿತ್ರ 'ಕಬಾಲಿ'ಯ ಸಂಭಾಷಣೆಯೊಂದರಲ್ಲಿ ಅಂಬೇಡ್ಕರ್ ಮತ್ತು ಗಾಂಧೀಜಿಯವರ ಬಟ್ಟೆಗಳನ್ನು ಪ್ರಸ್ತಾಪಿಸಿ ಒಗೆದ ಡೈಲಾಗ್ ಕೂಡಾ ಜನಪ್ರಿಯವಾಗಿತ್ತು. ಅಭಿಮಾನಿಗಳು ಅದಕ್ಕೆ ವಿಪರೀತ ಅರ್ಥಗಳನ್ನೂ ಕಲ್ಪಿಸಿಕೊಂಡಿದ್ದರು.

ಕಾವೇರಿ ನದಿ ನೀರಿನ ವಿವಾದ ಭುಗಿಲೆದ್ದಾಗಲೆಲ್ಲ ರಜನಿಕಾಂತ್, ಚೆನ್ನೈಯಲ್ಲಿ ಉಗ್ರ ಭಾಷಣಗಳನ್ನು ಮಾಡಿದ್ದಾರೆ. ಆದರೆ ಹುಟ್ಟಿ ಬೆಳೆದ ಬೆಂಗಳೂರಿನ ಜತೆಗೆ ಅವರ ನಂಟು ಹಾಗೆಯೇ ಇದೆ. ಅವರ ಸಿನಿಮಾಗಳು ಬೆಂಗಳೂರಿನಲ್ಲೂ ಭರ್ಜರಿ ಪ್ರದರ್ಶನಗಳನ್ನು ಕಾಣುತ್ತವೆ. ಇಲ್ಲೂ ಅವರಿಗೆ ಲಕ್ಷಾಂತರ ಅಭಿಮಾನಿಗಳಿದ್ದಾರೆ. ಭಾಷೆ, ಜಾತಿ, ಧರ್ಮ, ರಾಜ್ಯಗಳ ಗಡಿಗಳನ್ನೂ ಮೀರಿ ನಟನಾಗಿ ಬೆಳೆದು ನಿಂತಿರುವ ರಜನಿಕಾಂತ್ ರಾಜಕೀಯಕ್ಕೆ ಸೇರಿ ತಮ್ಮ ಜನಪ್ರಿಯತೆಯ ಮೇಲೆ ತಾವೇ ಕೆಸರು ಎರಚಿಕೊಳ್ಳಲಿಕ್ಕಿಲ್ಲ ಎನ್ನುತ್ತಾರೆ ಕೆಲವರು.

ರಜನಿಯ ಮನೆಮಾತು ಮರಾಠಿ. ಕರ್ನಾಟಕದಲ್ಲಿ ಹುಟ್ಟಿ ಬೆಳೆದು, ತಮಿಳ್ನಾಡಿನ ಸಿನಿಮಾರಂಗದಲ್ಲಿ ಮೇರುನಟನಾಗಿ ಬೆಳೆದಿರುವುದು ಅದ್ವಿತೀಯ ಸಾಧನೆಯೇ. ಕೆಲವು ಸಿನಿಮಾಗಳು ಮಕಾಡೆ ಮಲಗಿದರೂ ರಜನಿ ಮತ್ತೆ ಮತ್ತೆ ಫೀನಿಕ್ಸ್‌ನಂತೆ ಮೇಲೆದ್ದಿದ್ದಾರೆ. ವೃತ್ತಿಬದುಕಿನಲ್ಲಿ ಸವಾಲುಗಳು ಎದ್ದಾಗಲೆಲ್ಲ ಭರ್ಜರಿ ಡೈಲಾಗ್‌ಗಳನ್ನು ಹೊಡೆದು ರಾಜಕೀಯದ ಪರೋಕ್ಷ ಒಲವುಗಳನ್ನು ಪ್ರಕಟಿಸುವ ರಜನಿ, ತನ್ಮೂಲಕ ಪ್ರತಿಸ್ಪರ್ಧಿಗಳನ್ನು ಸಸ್ಪೆನ್ಸ್‌ನಲ್ಲಿ ಇಡುವುದನ್ನು ಕರತಲಾಮಲಕ ಮಾಡಿಕೊಂಡಿದ್ದಾರೆ. ಈ ವಿಷಯದಲ್ಲಿ ರಜನಿ ನಿಜಕ್ಕೂ ಚತುರ ರಾಜಕಾರಣಿಯೇ ಸೈ.

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65